# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 20-9-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಸೋಯಾಬೀನ್ ದರ ಇಳಿಕೆ

ಲಾತೂರ್ ಮಾರುಕಟ್ಟೆಯಲ್ಲಿ ಸೋಯಾಬೀನ್ ದರ ಕ್ವಿಂ.ಗೆ ರೂ 100–200 ಇಳಿಕೆಯಾಗಿದೆ. ಬೇಡಿಕೆ ಇಳಿಕೆ ಹಾಗೂ ಮುಂದಿನ ತಿಂಗಳು ಹೊಸಬೆಳೆಯ ಕಟಾವು ಆರಂಭವಾಗುವ ನಿರೀಕ್ಷೆಯಿಂದ ರೈತರು ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಮಾಡುತ್ತಿರುವುದರಿಂದ ಮಾರುಕಟ್ಟೆಗೆ ಪೂರೈಕೆ ಹೆಚ್ಚಳವಾಗಿ ದರ ಇಳಿಕೆಯಾಗಿದೆಯೆನ್ನಲಾಗಿದೆ. ಹೊಸ ಬೆಳೆಯ ಆವಕದ ತನಕ ಪೂರೈಕೆ ಹೆಚ್ಚಳ ಮುಂದುವರಿಯಬಹುದೆನ್ನಲಾಗಿದೆ.

## ಅಮೇರಿಕಾ ಸೋಯಾಬೀನ್ ದರ ಹೆಚ್ಚಳ

ಅಮೇರಿಕಾ ಸೋಯಾಬೀನ್ ಗೆ ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳವಾಗಿದೆ. ಚೀನಾದ ಹೆಚ್ಚಿನ ಖರೀದಿ ಜಾಗತಿಕ ರಾಜಕೀಯ ವಿದ್ಯಮಾನಗಳ ಅನಿಶ್ಚಿತತೆಗಳಿಂದ ಬೇಡಿಕೆ ಹೆಚ್ಚಳವಿದೆಯೆನ್ನಲಾಗಿದೆ. ಸೋಯಾಮೀಲ್ ದರಗಳೂ ಹಿಂದಿನ 5 ವರ್ಷಗಳ ಸರಾಸರಿಗಿಂತ ಹೆಚ್ಚಳವಿದೆಯೆನ್ನಲಾಗಿದೆ. ಹೆಚ್ಚಿನ ನ್ಯೂಟ್ರಿಶನ್ ಹೊಂದಿರುವ ಸೋಯಾಬೀನ್‌ನ ಇತರ ಬಳಕೆಗಳೂ ಹೆಚ್ಚಳವಿರುವುದರಿಂದ (ಆಹಾರ, ಕೈಗಾರಿಕಾ ಇತ್ಯಾದಿ) ಬೇಡಿಕೆ ಹೆಚ್ಚಳವಿದೆಯೆನ್ನಲಾಗಿದೆ. ಸೋಯಾಬೀನ್ ಎಣ್ಣೆಯ ಪ್ರತಿಸ್ಪರ್ಧಿ ಪಾಮೆಣ್ಣೆಯ ದರ ಇಳಿಕೆಯಾಗುತ್ತಿರುವುದು ಸೋಯಾಎಣ್ಣೆ ದರದ ಮೇಲೆ ಪ್ರಭಾವ ಬೀರುತ್ತಿದೆಯೆನ್ನಲಾಗಿದೆ.

## ಮಲೇಶಿಯನ್ ಪಾಮೆಣ್ಣೆ ದರ ಮತ್ತೆ ಹಿನ್ನಡೆ

ಹೆಚ್ಚುತ್ತಿರುವ ದಾಸ್ತಾನು ಇಂಡೋನೇಶಿಯಾದ ಡಿಸ್ಕೌಂಟ್ ದರದ ಮಾರಾಟ ಸ್ಪರ್ಧೆಯಿಂದ ಮಲೇಶೀಯಾದ ಪಾಮ್ ಎಣ್ಣೆ ಫ್ಯೂಚರ್ ದರ ಮತ್ತೆ ಇಳಿಕೆ ಕಂಡಿವೆ. ಇತ್ತೀಚಿನ ವರ್ಷಗಳಲ್ಲಿ ಪ್ರಥಮ ಬಾರಿಗೆ ಮಲೇಶೀಯನ್ ಪಾಮೆಣ್ಣೆ ದಾಸ್ತಾನು 2 ಮಿಲಿಯ ಟನ್‌ಗಳಿಗಿಂತ ಹೆಚ್ಚಳ ಕಂಡಿದೆಯೆನ್ನಲಾಗಿದೆ. ಇಂಡೋನೇಶೀಯಾದಿಂದಲೂ ದಾಸ್ತಾನು ಸಾಮಾನ್ಯ ಸ್ಥಿತಿಗೆ ಮರಳುವ ತನಕ ಡಿಸ್ಕೌಂಟ್ ಮಾರಾಟ ರಫ್ತು ಕರ ಕಡಿತ ಮುಂದುವರಿಯಬಹುದು.

## ಆಗಸ್ಟ್ 2022 ಸಸ್ಯಜನ್ಯ ತೈಲ ಆಮದು 33 ಶೇಕಡಾ ಹೆಚ್ಚಳ

ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್ ಅಂಕಿ ಅಂಶದದಂತೆ ಆಗಸ್ಟ್ 2022 ತಿಂಗಳಲ್ಲಿ ಭಾರತದ ಸಸ್ಯಜನ್ಯ ತೈಲ ಆಮದು ಹಿಂದಿನ ವರ್ಷದ ಈ ಅವಧಿಗಿಂತ 33 ಶೇಕಡಾ ಹೆಚ್ಚಳವಾಗಿ 1,401,233 ಟನ್‌ಗಳಾಗಿದೆ. ಹಿಂದಿನ ವರ್ಷ ಆಗಸ್ಟ್‌ನಲ್ಲಿನ ಆಮದು 1,053810 ಟನ್‌ಗಳು. 2022 ಆಗಸ್ಟ್‌ನಲ್ಲಿ ಖಾದ್ಯತೈಲ 1,375,002 ಟನ್‌ಗಳು ಹಾಗೂ ಖಾದ್ಯೇತರ 26,231 ಟನ್‌ಗಳು. ನವೆಂಬರ್ 2021 ರಿಂದ ಆಗಸ್ಟ್ 2022 ರ ತನಕ 10 ತಿಂಗಳ ಒಟ್ಟು ಆಮದು 11,376,226 ಟನ್‌ಗಳಾಗಿದ್ದು, ಹಿಂದಿನ ವರ್ಷದ ಇದೇ ಅವಧಿಯಲ್ಲಿ 10,708,446 ಟನ್‌ಗಳು ಆಮದಾಗಿತ್ತು. ಈ ವರ್ಷದ 10 ತಿಂಗಳುಗಳಲ್ಲಿ ತೀವ್ರ ಕುಸಿತವಾಗಿದ್ದು, ಪಾಮೆಣ್ಣೆ US $ 965, ಕಚ್ಚಾ ಪಾಮೆಣ್ಣೆ US $ 985, ಕಚ್ಚಾ ಸೋಯಾಬೀನ್ ಎಣ್ಣೆ US $ 607 ಹಾಗೂ ಕಚ್ಚಾ ಸೂರ್ಯಕಾಂತಿ ಎಣ್ಣೆ US $ 730 ದರ ಇಳಿಕೆಯಾಗಿವೆ. ವಿವಿಧ ಬಂದರುಗಳಲ್ಲಿ ಖಾದ್ಯ ತೈಲ ದಾಸ್ತಾನು(ಸೆಪ್ಟೆಂಬರ್ 1, 2022) 24.36 ಲಕ್ಷ ಟನ್‌ಗಳೆಂದು ಅಂದಾಜಿಸಲಾಗಿದೆ. ಆಗಸ್ಟ್ 1,2022 ಕ್ಕೆ ಒಟ್ಟು ದಾಸ್ತಾನು 23.04 ಟನ್‌ಗಳಾಗಿತ್ತೆನ್ನಲಾಗಿದೆ.

## ನವೆಂಬರ್ 21 ರಿಂದ ಆಗಸ್ಟ್ 2022 ರ ತನಕದ ಖಾದ್ಯತೈಲ ಆಮದು

ನವೆಂಬರ್ 21 ರಿಂದ ಆಗಸ್ಟ್ 2022 ರ ತನಕದ 10ತಿಂಗಳು ಅವಧಿಯಲ್ಲಿ ಮಲೇಶಿಯಾದಿಂದ 2520847 ಟನ್ ಕಚ್ಚಾ ಪಾಮೆಣ್ಣೆ ಹಾಗೂ 401086 ಟನ್ ರಿಫೈಂಡ್ ಪಾಮೆಣ್ಣೆ, ಇಂಡೋನೇಶೀಯಾ ದಿಂದ 1240400ಟನ್ ಕಚ್ಚಾ ಪಾಮೆಣ್ಣೆ ಹಾಗೂ 924583 ಟನ್ ರಿಫೈಂಡ್ ಪಾಮೆಣ್ಣೆ ಆಮದಾಗಿದೆಯೆಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್ (SEA OF INDIA) ಅಂಕಿ ಅಂಶಗಳು ಪ್ರಕಟವಾಗಿದೆ. ಇದೇ ಅವಧಿಯಲ್ಲಿ ಅರ್ಜೆಂಟಿನಾದಿಂದ 2,249518 ಟನ್ ಕಚ್ಚಾ ಸೋಯಾಬೀನ್ ಎಣ್ಣೆ ಹಾಗೂ ಬ್ರೆಜಿಲ್‌ನಿಂದ 981,615 ಟನ್ ಕಚ್ಚಾ ಸೋಯಾಬೀನ್ ಎಣ್ಣೆ ಹಾಗೂ ಯು.ಎಸ್.ಎ ನಿಂದ 159,815 ಟನ್ ಕಚ್ಚಾ ಸೋಯಾಬೀನ್ ಎಣ್ಣೆ ಆಮದಾಗಿದೆ. ರಷ್ಯಾ ಹಾಗೂ ಅರ್ಜೆಂಟಿನಾ ಪ್ರಮುಖ ಸೂರ್ಯಕಾಂತಿ ಎಣ್ಣೆ ಪೂರೈಕೆದಾರರಾಗಿದ್ದು , ರಷ್ಯಾದಿಂದ 72780 ಟನ್ ಹಾಗೂ ಅರ್ಜೆಂಟಿನಾದಿಂದ 30600 ಟನ್ ಸೂರ್ಯಕಾಂತಿ ಎಣ್ಣೆ ಆಗಸ್ಟ್ 2022 ರಲ್ಲಿ ಆಮದು ಮಾಡಲಾಗಿದೆಯೆನ್ನಲಾಗಿದೆ.